# ಸಾಮರಸ್ಯದ ಶಾಸ್ತ್ರೀ ಮಾರ್ಕೆಟ್



ಚಿತ್ರ: ಎಸ್. ವಿಷ್ಣುಕುಮಾರ್







■ ಚಿತ್ರ–ಲೇಖನ: **ದಿಲಾವರ್ ರಾಮದುರ್ಗ**

**ಹೆ**ಚ್ಚೂ ಕಮ್ಮಿ ಶುಷ್ಕ ವಾತಾವರಣ. ಧೂಳಿನ ಕಾರಣಕ್ಕೆ ಗಂಟಲು, ಮೂಗು ಮತ್ತು ಚರ್ಮಕ್ಕೆ ಆಗಾಗ ಕಿರಿ ಕಿರಿ. ಇದರ ಹೊರತಾಗಿ ವಿಜಯಪುರದ ವಾತಾವರಣ ಬಹುತೇಕ ಆರೋಗ್ಯಪೂರ್ಣ. ಏಪ್ರಿಲ್–ಮೇ ತಿಂಗಳಲ್ಲಿ ಬಿಸಿಲು ಅಸಹನೀಯ. ಉಳಿದೆಲ್ಲ ತಿಂಗಳುಗಳಲ್ಲಿ ತಾಪ ಹೆಚ್ಚಿದ್ದರೂ ಸಹನೀಯ. ಶುಷ್ಕ ವಾತಾವರಣದಿಂದಾಗಿ ಆರ್ದ್ರತೆಯಲ್ಲಿ ವ್ಯತ್ಯಾಸವಾಗುತ್ತದೆ. ಜೂನ್ ತಿಂಗಳಲ್ಲಿ ಮುಂಗಾರು. ಮಳೆ ಪ್ರಮಾಣ ಕಮ್ಮಿ. ಇಲ್ಲಿ ಎರಡು ವಿಧದ ಮಣ್ಣಿದೆ. ಒಂದು ಕಡು ಕಪ್ಪು ಬಣ್ಣದ ಯರೀ ಮಣ್ಣು ಅಂದರೆ ಕಪ್ಪು ಬಣ್ಣದಲ್ಲೇ ಎರೆದ ಮಣ್ಣು (ಅಥವಾ ಎರೆ ಮಣ್ಣು) ಎನ್ನುವ ಗುಣವಾಚಕಾರ್ಥದಲ್ಲಿ. ಜೋಳ, ಗೋಧಿ, ಬೇಳೆ, ದ್ವಿದಳ ಧಾನ್ಯ, ಸೂರೆಪಾನದಂಥ ಬೆಳೆಗಳಿಗೆ ಸೂಕ್ತ. ಮತ್ತೊಂದು, ಕೆಂಪು ಮಣ್ಣು. ಇದನ್ನು ಮಸಾರಿ ಅಥವಾ ಮಡ್ಡಿ ಭೂಮಿ ಎಂದು ಕರೆಯುತ್ತಾರೆ. ನೀರಾವರಿಗೆ ಮತ್ತು ತೋಟಗಾರಿಕೆಗೆ ಅತ್ಯಂತ ಯೋಗ್ಯ ಮಣ್ಣು.

ತರಕಾರಿ ಬೆಳೆಯುವುದಕ್ಕೆ ಇಲ್ಲಿನ ಮಣ್ಣು ಮತ್ತು ವಾತಾವರಣ ಅನುಕೂಲಕರ. ತೇವಾಂಶ ಹೆಚ್ಚು ಕಾಲ ಇಟ್ಟುಕೊಳ್ಳುವ ಮಣ್ಣಿನ ಗುಣದಿಂದಾಗಿ ಜೋಳ, ದ್ರಾಕ್ಷಿ, ಸಪೋಟ, ದಾಳಿಂಬೆ ವಿಶೇಷವಾಗಿ ಬೆಳೆಯಬಹುದಾಗಿದೆ. ಸಮಯಕ್ಕೆ ಸರಿಯಾದ ಒಂದೆರಡು ಉತ್ತಮ ಮಳೆ ಬಿದ್ದರೆ ಇಲ್ಲಿನ ತರಕಾರಿ, ಹಣ್ಣುಗಳು ಸ್ವಾದಗೊಳ್ಳುತ್ತವೆ. ನಿತ್ಯ ತಾಜಾ ಹಣ್ಣು, ತರಕಾರಿ ತಿನ್ನುವುದರಿಂದಲೇ ಜನ ಬಿರುಬಿಸಿಲಿನಲ್ಲೂ ಲವ ಲವಿಕೆಯಿಂದಿರುತ್ತಾರೆ.

ವಿಜಯಪುರದ ವಿಶೇಷ ವಿನ್ಯಾಸವುಳ್ಳ ಶಾಸ್ತ್ರೀ ಮಾರುಕಟ್ಟೆ ಸುತ್ತ ತರಕಾರಿ, ಹಣ್ಣುಗಳ ಮಾರಾಟ ದೃಶ್ಯ ಸುಂದರ ಕ್ಯಾನವಾಸ್‌ನಂತೆನಿಸುತ್ತದೆ. ಬಹುತೇಕ ಹೆಂಗಸರು ವ್ಯಾಪಾರದಲ್ಲಿ ತೊಡಗಿರುತ್ತಾರೆ. ಸವತೆಕಾಯಿ, ಗಜ್ಜರಿ, ಬದನೆಯಲ್ಲಿ ಮುಳಗಾಯಿ, ಹೆಣಗಾಯಿ, ಮೆಂತೆ ಪಲ್ಯ, ಕೊತ್ತಂಬರಿ, ನಿಂಬೆ ಹಣ್ಣು ಅತ್ಯಂತ ಸ್ವಾದಮಯ. ಇಲ್ಲಿನ ನಿಂಬೆ, ಅದರಕ್ (ಹಸಿ ಶುಂಠಿ) ಹೆಸರುವಾಸಿ. ಒಣದ್ರಾಕ್ಷಿ, ಡೇಟ್ಸ್, ಹುರಿದ

**(8ನೇ ಪುಟ ನೋಡಿ)**